# ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ
## (ಕನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಂ 10, ಖಾದಿ ಭವನ್, ಜಸ್ಮಾದೇವಿ ಭವನ್ ರಸ್ತೆ, ವಸಂತ ನಗರ, ಬೆಂಗಳೂರು–560052,

ದೂರವಾಣಿ : 080–22250017
22250051

email: mdkstdevp@yahoo.co.in
mdkmvstdc@gmail.com




ದಿನಾಂಕ : 28ನೇ ನವಂಬರ್ 2016

ಶ್ರೀ ವಿ.ಎನ್.ಗಿರಿಮಲ್ಲಪ್ಪ
ಅಧ್ಯಕ್ಷರು

# ಸಂದೇಶ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ರಾಜ್ಯದಲ್ಲಿ ಪರಿಶಿಷ್ಟ ಪಂಗಡದವರ ಆರ್ಥಿಕ ಅಭಿವೃದ್ಧಿಗಾಗಿ ಬ್ಯಾಂಕಗಳ ಸಹಯೋಗದೊಂದಿಗೆ ವಿವಿಧ ಯೋಜನೆಗಳಾದ ಸ್ವಯಂ ಉದ್ಯೋಗ, ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ , ಪರಿಶಿಷ್ಟ ಪಂಗಡಗದ ಮಹಿಳೆಯರ ರಚಿಸಿಕೊಂಡಿರುವ ಸ್ವಸಹಾಯ ಸಂಘಗಳಿಗೆ ಆರ್ಥಿಕ ನೆರವನ್ನು ಒದಗಿಸಲು ಮೈಕ್ರೋ ಕ್ರೆಡಿಟ್ (ಕಿರುಸಾಲ) ಯೋಜನೆ, ಪರಿಶಿಷ್ಟ ಪಂಗಡದ ಭೂರಹಿತ ಮಹಿಳಾ ಕಾರ್ಮಿಕರನ್ನು ಭೂ ಒಡೆಯರನ್ನಾಗಿಸಲು ಭೂ ಒಡೆತನ ಯೋಜನೆ, ಹಾಗೂ ಹಾಗೂ ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತೀ ಸಣ್ಣ ಖುಷ್ಕಿ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಮೂಲಕ ಅನ್ನದಾತರನ್ನು ಪ್ರಗತಿಪರ ರೈತರನ್ನಾಗಿಸಲು ಗಂಗಾ ಕಲ್ಯಾಣ ವೈಯುಕ್ತಿಕ ನೀರಾವರಿ ಕೊಳವೆ/ತೆರೆದ ಭಾವಿ , ಏತ ನೀರಾವರಿ ಯೋಜನೆಯನ್ನು ಅನುಷ್ಟಾನಗೊಳಿಸುತ್ತಿದೆ.

ಭೂ ಒಡೆತನ ಯೋಜನೆಯಡಿ ಜಮೀನು ಖರೀಧಿಗೆ ನಿಗದಿಪಡಿಸಲಾಗಿದ್ದ ವ್ಯಾಪ್ತಿಯ ಮಿತಿಯನ್ನು ಪ್ರಸ್ತುತ 5.00 ಕಿ.ಮೀನಿಂದ 10.0 ಕಿ.ಮೀ ಹೆಚ್ಚಿಸಿದೆ ಮತ್ತು ಈ ಯೋಜನೆಯಡಿ ಫಲಾನುಭವಿಗಳು ಪಡೆದ ಖುಷ್ಕಿ ಜಮೀನುಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ನೀರಾವರಿ ಕೊಳವೆ ಭಾವಿಗಳನ್ನು ನಿರ್ಮಿಸುವ ಮೂಲಕ ಫಲಾನುಭವಿಗಳು ಉತ್ತಮ ಬೆಳೆಗಳನ್ನು ಬೆಳೆದು , ಆರ್ಥಿಕವಾಗಿ ಸಬಲರನ್ನಾಗಿಸಲಾಗುತ್ತದೆ.

ನಿಗಮದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಕಠಿಣ ಪರಿಶ್ರಮದ ಮೂಲಕ ಅರ್ಹ ಫಲಾನುಭವಿಗಳಿಗೆ ಯೋಜನೆಗಳಡಿಯಲ್ಲಿನ ಸೌಲಭ್ಯವನ್ನು ತ್ವರಿತವಾಗಿ ತಲುಪಿಸುವ ಅವಶ್ಯಕತೆ ಇರುತ್ತದೆ. ಇದಲ್ಲದೆ ನಿಗಮದಿಂದ ಫಲಾನುಭವಿಗಳ ಪಡೆದ ಸೌಲಭ್ಯವನ್ನು ಉಪಯುಕ್ತವಾಗಿ ಬಳಸಿಕೊಂಡು, ನಿಗಮಕ್ಕೆ / ಬ್ಯಾಂಕಿಗೆ ಮರುಪಾವತಿ ಮಾಡಬೇಕಾದ ಸಾಲದ ಹಣವನ್ನು ನಿಗದಿತ ಅವಧಿಯೊಳಗೆ ಪಾವತಿಸುವ ಮೂಲಕ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದಲ್ಲಿ ಸಹಕರಿಸುವಂತೆ ಕೋರುತ್ತೇನೆ.

ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಮಾಜ ಕಲ್ಯಾಣ ಸಚಿವರು, ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಮತ್ತು ನಿಗಮದ ನಿರ್ದೇಶಕರ ಮಂಡಳಿಯ ನಿರ್ದೇಶಕರು ನಿಗಮಕ್ಕೆ ನಿಡುತ್ತಿರುವ ಪೂರ್ಣ ಸಹಕಾರ ಪ್ರೋತ್ಸಾಹ ಸಲಹೆ ಹಾಗೂ ಮಾರ್ಗದರ್ಶನವು ನಿಗಮವನ್ನು ಪ್ರಗತಿ ಪಥದಲ್ಲಿ ಸಾಗುವುದಕ್ಕೆ ಸಹಕಾರಿಯಾಗಿದೆ.

ಈ ವೆಬ್ ಸೈಟ್ ಮೂಲಕ ನಿಗಮದ ಕಾರ್ಯಕ್ರಮಗಳ ಮಾಹಿತಿಯು ಹೆಚ್ಚು ಜನರಿಗೆ ತಲುಪಿಸಲು ಸಾಧ್ಯವಾಗಬಹುದೆಂದು ಆಶಿಸುತೇನೆ ಹಾಗೂ ನಿಗಮವು ಮುಂಬರುವ ದಿನಗಳಲ್ಲಿ ಹೆಚ್ಚು ಹೆಚ್ಚು ಅರ್ಹ ಫಲಾನುಪೇಕ್ಷಿಗಳಿಗೆ ಋಣಾತ್ಮಕ ಸೌಲಭ್ಯವನ್ನು ಅಗತ್ಯವೆಂದು ಕಂಡುಬರುವ ಉಪಯುಕ್ತ ಏರ್ಪಾಡುಗಳೊಂದಿಗೆ ಕಲ್ಪಿಸುವಲ್ಲಿ ಪ್ರಗತಿ ಸಾಧಿಸಲೆಂದು ಹಾರೈಸುತೇನೆ.

ವಿ.ಎನ್.ಗಿರಿಮಲ್ಲಪ್ಪ
ಅಧ್ಯಕ್ಷರು